




**15** ಸರಳಾದೇವಿಯ ಕೃಪೆಯಿಂದ ಚಿದು ದೊಡ್ಡ ವಿದ್ವಾಂಸನಾದನು. ಇದುವರೆಗೂ ಎಲ್ಲರಿಗೂ ಅಪಹಾಸ್ಯದ ವ್ಯಕ್ತಿಯಾಗಿದ್ದ ಚಿದುವು ಬಹಳ ಶ್ರೇಷ್ಠ ಮಟ್ಟದ ಕವಿಯಾಗಿ ಮಾರ್ಪಟ್ಟನು. ಅವನು ರಾಮಾಯಣ ಮತ್ತು ಮಹಾಭಾರತ ಕಥೆಗಳನ್ನು ಒರಿಯಾ ಭಾಷೆಯಲ್ಲಿ ರಚಿಸಿದನು. ನಿರಕ್ಷರಸ್ಥರು ಕೂಡ ಇದನ್ನು ಕೇಳಿ ಅರ್ಥ ಮಾಡಿಕೊಳ್ಳುತ್ತಿದ್ದರು. ಅಂದಿನಿಂದ ಚಿದು ಸರಳಾದಾಸನೆಂದು ಪ್ರಖ್ಯಾತನಾದನು.

**16** ಸರಳಾದಾಸನು ಭಕ್ತಿಸಾಹಿತ್ಯವನ್ನು ಮಾತ್ರ ರಚಿಸಲಿಲ್ಲ. ಸಮಾಜದ ರಕ್ಷಣೆಗೂ ಸ್ಪಂದಿಸುತ್ತಿದ್ದನು. ಒಂದು ದಿನ ಆರಕ್ಷಕರು ಅವನನ್ನು ಹುಡುಕುತ್ತ ಬಂದರು.




**17** ಸರಳಾದಾಸನು ತಂದೆಯನ್ನು ಸಮಾಧಾನಪಡಿಸಿದನು. ಯುದ್ಧಕ್ಕೆ ಹೋದನು. ತಾಯ್ನಾಡಿನ ವಿಜಯಕ್ಕೆ ಸಹಾಯ ಮಾಡಿದನು. ಸರಳಾದಾಸನು 'ಜನಸಾಮಾನ್ಯರ ಕವಿ' ಮತ್ತು 'ಒರಿಯಾ ಸಾಹಿತ್ಯದ ಪಿತಾಮಹ' ಎಂದು ಜನರು ಅವನನ್ನು ಹೊಗಳುತ್ತಾರೆ. ಅವನ ರಾಮಾಯಣವನ್ನು 'ಗ್ರಾಮೀಣ ರಾಮಾಯಣ' ಎಂದು ಕರೆಯುತ್ತಾರೆ.





**ಶಿಷ್ಯ :** ಅಮ್ಮಾ, ಭಗವಂತನನ್ನು ಹೇಗೆ ನೋಡುವುದು?

**ಶ್ರೀಮಾತೆ ಶಾರದಾದೇವಿ:** ಭಗವಂತನ ಅನುಗ್ರಹದಿಂದ ಮಾತ್ರವೇ ಆತನನ್ನು ನೋಡಬಹುದು. ಜಪ ಮತ್ತು ಧ್ಯಾನಗಳನ್ನು ಮಾಡುತ್ತ ಹೋಗಬೇಕು. ಅವು ಮನಸ್ಸಿನಲ್ಲಿರುವ ಕೊಳಕನ್ನು ನಿವಾರಿಸುತ್ತವೆ. ಹಾಗೆಯೇ ಪ್ರಾರ್ಥನೆ ಮುಂತಾದ ಆಧ್ಯಾತ್ಮಿಕ ಸಾಧನೆಗಳನ್ನೂ ಮಾಡುತ್ತಿರಬೇಕು. ನಾವು ಹೂವನ್ನು ಮುಡಿದುಕೊಂಡಾಗ, ಅದರ ಸುವಾಸನೆ ಎಲ್ಲ ಕಡೆ ಹರಡುತ್ತದೆ. ಹಾಗೆಯೇ ಗಂಧದ ತುಂಡನ್ನು ಕಲ್ಲಿಗೆ ಉಜ್ಜಿದಾಗ, ಸುಗಂಧವು ಸುತ್ತಲೂ ಪಸರಿಸುತ್ತದೆ. ಹಾಗೆಯೇ ಭಗವಂತನ ನಿರಂತರ ಸ್ಮರಣೆ ಭಕ್ತಿಭಾವವನ್ನು ಎಲ್ಲ ಕಡೆ ಮೂಡಿಸುತ್ತದೆ. ಈ ಮೂಲಕ ಎಲ್ಲ ಆಸೆಗಳಿಂದ ಬಿಡುಗಡೆಯನ್ನು ಪಡೆಯಬಹುದು ಹಾಗೂ ಭಗವಂತನ ಸಾಕ್ಷಾತ್ಕಾರವನ್ನು ಹೊಂದಬಹುದು.